ಕಳೆದುಕೊಳ್ಳುತ್ತಿದ್ದ ಮದಂತನನ್ನು ಕಾಪಾಡಿದ್ದಳು!

ಪ್ರತ್ಯುಪಕಾರ ಮಾಡಲು ಬಯಸಿದ್ದ ಮದಂತ. ಕಾವ್ಯ ಕೇಳಿಕೊಂಡಿದ್ದಳು. ಕಾವ್ಯ ಸಾಯುವ ಕೊನೆಯ ಕ್ಷಣದಲ್ಲಿ ಆಡಿದ್ದ ಒಂದೇ ಒಂದು ಮಾತು. ನನ್ನ ತಾಯಿಯನ್ನು ಕಾಪಾಡಿ. ಹೌದು. ಕಾಪಾಡಬೇಕು! ಪರಮ ಪವಿತ್ರವಾದ ವಾಮಾಚಾರದ ವಿದ್ಯೆ ಇರುವುದು ನಿರಪರಾಧಿಗಳಿಗೆ, ಒಳ್ಳೆಯ ವ್ಯಕ್ತಿಗಳಿಗೆ ಆಗಲಿರುವ ಅನ್ಯಾಯವನ್ನು ತಡೆಯಲು. ಅರುಂಧತಿ ಒಳ್ಳೆಯ ಹೆಣ್ಣು. ಈ ವಾಮಾಚಾರ ಎನ್ನುವುದು ಸತ್ಯವೇ ಆಗಿದ್ದರೆ ಅರುಂಧತಿ ಬದುಕಲೇಬೇಕು. ಆದರೆ ಅದು ಸುಲಭವಲ್ಲ. ಅರುಂಧತಿಯ ಮೇಲೆ ಈಗಾಗಲೇ ದ್ವಿರಕ್ತಹಸ್ತ ಚಂಡಿಕೆ ಪ್ರಯೋಗ ಆಗಿವೆ.

ಈ ಪ್ರಯೋಗಕ್ಕೆ ಎದುರಿಲ್ಲ. ಅದಕ್ಕೆ ತಡೆಯೇ ಇಲ್ಲ. ಆದರೆ ಆ ತಾಯಿಯನ್ನು ರಕ್ಷಿಸಬೇಕು. ಅದಕ್ಕೆ ಉಳಿದಿರೋದು ಒಂದೇ ಮಾರ್ಗ.

ಈ ಪ್ರಯೋಗದ ಶಕ್ತಿಗೆ ಎದುರಾಗಿ ಪಂಚ ಕ್ಷುದ್ರಶಕ್ತಿಗಳೇ ನಿಲ್ಲಬೇಕು. ಪಂಚಶಕ್ತಿಗಳು ಬರಬೇಕು. ಪಂಚ ಕ್ಷುದ್ರಶಕ್ತಿಗಳೆಂದರೆ ಗುಮ, ಚಂಡ, ಕಾಲ, ಕಾಪಾಲ, ರಕ್ತೋದರ. ಪಂಚ ಶಕ್ತಿಗಳ ಸಂಗಮ ಆಗಬೇಕು. ಆಗ ಮಾತ್ರ ಇದು ಸಾಧ್ಯ!

ಮದಂತ ಈಗ ಒಂಟಿ ಕಾಲಿನಲ್ಲಿ ನಿಂತುಕೊಂಡು ಪಂಚಸೂಕ್ತ ಆವಾಹನೆಯ ಮಂತ್ರಗಳನ್ನು ತ್ರಿಮಯ ಸ್ವರದಲ್ಲಿ ಹೇಳುತ್ತಿದ್ದಾನೆ. ಭಯಂಕರ ಸಿಂಹನಾದ ಮಾಡುತ್ತಾ ರಕ್ತ ತರ್ಪಣ ನೀಡುತ್ತಿದ್ದಾನೆ. ಪಂಚಸೂಕ್ತ ಮಂತ್ರದ ಕೊನೆಯ ಚರಣ ಮುಗಿದ ಕೂಡಲೇ ಪ್ರಳಯವೇ ಸಂಭವಿಸಿತೇನೋ ಎಂಬಂತೆ ಭಯಂಕರ ಕಲರವ ಉಂಟಾಯಿತು.

ಇಡೀ ಸ್ಮಶಾನ ತಿರುಗುತ್ತಿದೆ. ಭೂಮಿಯಲ್ಲಿ ಕಂಪನ. ಗಾಳಿ ನುಗ್ಗಿ ಬರುತ್ತಿದೆ. ದಡ್, ದಡ್ ಎಂಬ ಶಬ್ದದೊಂದಿಗೆ ಮರಗಳು ಬುಡ ಸಮೇತ ಉರುಳುತ್ತಿವೆ. ಅಗೋಚರ ರೂಪದಲ್ಲಿರುವ ಭೂತ, ಪ್ರೇತ, ಪಿಶಾಚಿಗಳು ಅಟ್ಟಹಾಸ ಮಾಡುತ್ತಿವೆ. ಆಗ... ಆಗ ಕಂಡಿತು! ರುದ್ರ ಮನೋಹರ ದೃಶ್ಯ.

ಅನಂತ ಆಗಸದ ಯಾವುದೋ ಮೂಲೆಯಿಂದ ಪ್ರಚಂಡ ವೇಗದಲ್ಲಿ ನುಗ್ಗಿ ಬರುತ್ತಿವೆ ಐದು ವಿಭಿನ್ನ ಬಣ್ಣಗಳ ಜ್ವಾಲೆಗಳು! ಐದು ಶಕ್ತಿಗಳು. ಅಪರೂಪ... ತುಂಬಾ ಅಪರೂಪ...

ಐದು ಶಕ್ತಿಗಳನ್ನು ಸಂಯೋಗಗೊಳಿಸಿ ಭೂಮಿಗೆ ಆಹ್ವಾನಿಸುವುದು ಸಾಮಾನ್ಯ ಮಾಂತ್ರಿಕರಿಂದ ಸಾಧ್ಯವೇ ಇಲ್ಲ ಬಿಡಿ. ಮದಂತ ಈಗ ಆಗಸದ ಕಡೆ ಮುಖ ಮಾಡಿ ಎರಡು ಕೈಗಳನ್ನು ಮೇಲೆತ್ತಿದ್ದಾನೆ! ಜ್ವಾಲೆಯ ಕಡೆ ನೋಡುತ್ತಾ ಮೌನವಾಗಿ ಪ್ರಾರ್ಥನೆ ಮಾಡುತ್ತಿದ್ದಾನೆ.

ಹೇ... ಮಹಾನ್ ಶಕ್ತಿಗಳೇ... ಮಾಂತ್ರಿಕ ವಿದ್ಯೆ ಇರುವುದು ಲೋಕಕಲ್ಯಾಣಕ್ಕಾಗಿ. ಜನರ ಕ್ಷೇಮಕ್ಕಾಗಿ, ಒಳ್ಳೆಯವರ ರಕ್ಷಣೆಗಾಗಿ. ಅದು ನಿಜ ಆಗಬೇಕು. ವಾಮಾಚಾರ ಸತ್ಯ ಎನ್ನುವ ಪರಮ ರಹಸ್ಯದ ಸಾಕ್ಷಾತ್ಕಾರ ಆಗಬೇಕು. ಅನುಗ್ರಹಿಸಿ ಕಾಪಾಡಿ. ಆಗಸದಲ್ಲಿ ಮಿಂಚು ಮೂಡಿತು. ಜ್ವಾಲೆಗಳು ಅದ್ರುಶ್ಯವಾದವು. ಮದಂತನಿಗೆ ಈಗ ಸಂತೋಷ ಉಂಟಾಗುತ್ತಿದೆ. ಅವನು ಉಪಸಂಹಾರದ ಕ್ರಮ ಮುಗಿಸಿದ.

* * *

ಅಯ್ಯೋ ನನಗೇನಾಗುತ್ತಿದೆ. ದ್ವಿರಕ್ತಹಸ್ತ ಚಂಡಿಕ ಪ್ರಯೋಗವನ್ನು ಯಾವ ಲೋಪವೂ ಸಹ ಇಲ್ಲದಂತೆ ಮಾಡಿ ಮುಗಿಸಿದ್ದೇನೆ. ಇದೇನಿದು ಸಂಕಟ. ಉರಿ! ಅಯ್ಯೋ... ನನ್ನಿಂದ ತಡೆಯಲಾಗುತ್ತಿಲ್ಲ. ಅಬ್ಬ... ಹಾಂ... ಅಯ್ಯೋ, ಮಾಂತ್ರಿಕ ಮಂಡಲದೊಳಗೆ ನಿಂತಿರುವ ಅವಳು ನರಳುತ್ತಿದ್ದಾಳೆ. ದೇಹವೆಲ್ಲಾ ಬೆವರುತ್ತಿದೆ. ಎದೆಯನ್ನು ಹಿಂಡಿದಂತೆ ಆಗುತ್ತಿದೆ. ಕರುಳನ್ನು ಹಿಡಿದು ಎಳೆದಂತೆ ಆಗುತ್ತಿದೆ. ಯಾಕೆ, ಈ ಯಾತನೆ ಯಾಕೆ? ನೋವು, ಉರಿ ತಡೆಯಲಾರದೆ ನೆಲದ ಮೇಲೆ ಉರುಳಿ ಬಿದ್ದಳು ಮಲ್ಲಿಗೆ.

ಮಲ್ಲಿಗೆಗೆ ಸಂದೇಹ ಬಂದಿತು. ಯಾರಾದರೂ ನನ್ನ ವಿರುದ್ಧ ಪ್ರಯೋಗ ಮಾಡುತ್ತಿರಬಹುದೆ? ಮಾಂತ್ರಿಕ ಗುರು ಮದಂತ ನೆನಪಾದ. ಅವನೇ... ಅವನೇ ಇರಬೇಕು. ಆದರೆ ಈಗಂತೂ ಅಸಾಧ್ಯ! ದ್ವಿರಕ್ತಹಸ್ತ ಚಂಡಿಕ ಪ್ರಯೋಗ ಮಾಡುತ್ತಿರುವ ಸಾಧಕನ ಮೇಲೆ ಯಾವ ಪ್ರಯೋಗವೂ ಸಹ ಯಶಸ್ವಿಯಾಗಲಾರದು. ಇದು ಎಲ್ಲರಿಗೂ ತಿಳಿದಿರುವ ಮಾಂತ್ರಿಕ ವಿದ್ಯೆಯ ರಹಸ್ಯ.

ಗುರು ಮಾಂತ್ರಿಕ ಮದಂತ ನನ್ನ ಮೇಲೆ ಪ್ರಯೋಗ ಮಾಡಿಲ್ಲ. ಆದರೆ... ಆದರೆ ನನಗೇಕೆ ಮರಣ ಸಂಕಟ ಕಾಣಿಸಿಕೊಂಡಿದೆ. ರಕ್ತ ವಾಂತಿಯಾಯಿತು. ಒಂದಲ್ಲ... ಆರೇಳು ಸಲ. ದೇಹ ಎಗರಿ ಎಗರಿ ಬೀಳುತ್ತಿದೆ. ಕೊನೆಯ ಕ್ಷಣಗಳಲ್ಲಿ ಮಲ್ಲಿಗೆಗೆ ತನ್ನ ತಂದೆ, ತಾಯಿ, ತಂಗಿ ನೆನಪಿಗೆ ಬರುತ್ತಿದ್ದಾರೆ. ಅವರನ್ನೆಲ್ಲಾ ನಾನೇ... ನಾನೇ ನನ್ನ ಮಾಂತ್ರಿಕ ವಿದ್ಯೆಯಿಂದ ಮುಗಿಸಿದೆ. ನೋವು ತಡೆಯಲಾರದೆ ಒಂದೇ ಒಂದು ಸಲ 'ಅಯ್ಯೋ... ಅಮ್ಮಾ' ಎಂದು ಕಿರುಚಿದಳು.

ಬದುಕಿನ ಅವಧಿಯಲ್ಲಿ ಒಂದೇ ಒಂದು ಸಲವೂ ಅಮ್ಮಾ ಎಂದು ಕರೆದಿರಲಿಲ್ಲ. ಸಾಯುವಾಗ ಅಯಾಚಿತವಾಗಿ ಬಂದಿದೆ. ರಕ್ತ ವಾಂತಿಯಾಯಿತು.

* * *

ನೆಲದ ಮೇಲೆ ಅರುಂಧತಿ ಬಿದ್ದಿದ್ದಾಳೆ. ಅವಳ ಎಡ ಪಕ್ಕೆ ಮತ್ತು ತೋಳಿನಲ್ಲಿ ಆಳವಾದ ತಿವಿತದ ಗಾಯ ಉಂಟಾಗಿವೆ. ರಕ್ತ ಜಿನುಗುತ್ತಿದೆ. ಅರುಂಧತಿ ಪ್ರಾಣ ಭಯದಿಂದ ಅತ್ತ ಕಡೆ ನೋಡಿದಳು. ಕತ್ತಲಲ್ಲಿ ಕಂಡಿತು ಆಕೃತಿ. ಮಾನವ ಆಕೃತಿ. ಮಿಂಚಿನ ಬೆಳಕಲ್ಲಿ ಮುಖ ಕಂಡಿತು. ಭಯಾಶ್ಚರ್ಯದ ಉದ್ಗಾರ. ಕಣ್ಣುಗಳನ್ನು ಮುಚ್ಚಿದಳು. ಎರಡು ಸಲ ಚಾಕುವಿನಿಂದ ತಿವಿದಿದ್ದ. ಕತ್ತಲಲ್ಲಿ ಎಲ್ಲಿಗೆ ತಿವಿದಿದ್ದೇನೆ ಅಂತ ಗೊತ್ತಿರಲಿಲ್ಲ. ಅವಳು ಕಿರುಚಿಕೊಂಡ ರೀತಿಯಿಂದ ತನ್ನ ಗುರಿ ತಪ್ಪಿಲ್ಲ ಎಂದುಕೊಂಡ.

ಹೆಜ್ಜೆಗಳ ಸಪ್ಪಳ ಕೇಳಿಸಿತು. ಟಾರ್ಚ್‌ನ ಬೆಳಕು ಕಂಡಿತು. ಯಾರೋ ಬರುತ್ತಿದ್ದಾರೆ ಎಂದುಕೊಂಡು ಅವನು ಕತ್ತಲಲ್ಲಿ ಮರೆಯಾದ. ಮದಂತನಿಗೆ ಕಂಡಿತು ಆ ದೃಶ್ಯ. ರಕ್ತದ ಮಡುವಿನಲ್ಲಿ ಅರುಂಧತಿ. ಗಾಬರಿ, ಆತುರದಿಂದ ಬಂದು ನೋಡಿದ. ಭಯದ ಜೊತೆ ಆಶ್ಚರ್ಯ, ಸಂದೇಹ ಉಂಟಾಗುತ್ತಿದೆ. ಇದು ಹೇಗೆ ಸಾಧ್ಯ? ಮಲ್ಲಿಗೆಯ ಪ್ರಯೋಗಕ್ಕೆ ತಡೆಯಾಗಲು ಪಂಚ ಕ್ಷುದ್ರಶಕ್ತಿಗಳೇ ಪ್ರತ್ಯಕ್ಷವಾಗಿದ್ದವು ಜ್ವಾಲೆಯ ರೂಪದಲ್ಲಿ. ಹಾಗಾದರೆ ಅದು ಸುಳ್ಳೇ? ಈ ತಾಯಿ ಸತ್ತಿರುವಳೇ? ಹತ್ತಿರ ಬಂದು ಪರಿಶೀಲಿಸಿದ ಕೂಡಲೇ ಉಸಿರಾಟದಿಂದ ತಿಳಿಯಿತು ಅರುಂಧತಿ ಸತ್ತಿರಲಿಲ್ಲ. ಮದಂತ ತಡಮಾಡಲಿಲ್ಲ. ಅವಳನ್ನು ಎರಡು ಕೈಗಳಿಂದ ಎತ್ತಿ ಭುಜದ ಮೇಲೆ ಹಾಕಿಕೊಂಡು ಊರಿನ ಕಡೆ ಓಡಲಾರಂಭಿಸಿದ. ಡಾಕ್ಟರ್ ಹತ್ತಿರ ಬರುವ ತನಕ ಈ ಮದಂತ ಎಲ್ಲಿಯೂ ನಿಂತಿರಲಿಲ್ಲ. ಅವಳಿಗೆ ಚಿಕಿತ್ಸೆ ಪ್ರಾರಂಭವಾಯಿತು. ಅವಳ ಬಾಯಿಂದ ಆಗಾಗ 'ಸುರೇಂದ್ರ... ಸುರೇಂದ್ರ' ಎನ್ನುವ ಹೆಸರು ಕೇಳಿ ಬರುತ್ತಿತ್ತು.

* * *

ಮದಂತ ಸ್ಮಶಾನಕ್ಕೆ ಬಂದ. ಅಲ್ಲಿ ಕಂಡ ದೃಶ್ಯವೇನು? ತಲೆ ಬುರುಡೆಗಳು ಮತ್ತು ಹರಡಿಕೊಂಡಿರುವ ಪೂಜಾ ಸಾಮಾಗ್ರಿಗಳ

## ಮಹಾಮಾರಿಯ ನಿಯಂತ್ರಿಸುವ...

ಮರೆಯುತ ಭೇದ ಭಾವಗಳ
ಬೆಸೆಯುತ ಮನಸು ಮನಸುಗಳ
ಹರಡದೆ ಹಗೆ ಈ ವಿಷಮಯದ
ಪರಿಸ್ಥಿತಿಯಲಿ
ಅನುಭವಿಸಿ ಸುಖ ದುಃಖ
ಸಮಸ್ಥಿತಿಯಲಿ
ಜಯವ ಸಾಧಿಸುವ ಸಾಮಾಜಿಕ
ಅಂತರ ಅನುಸರಿಸಿ
ನೆಮ್ಮದಿಯಾಗಿ ಜೀವಿಸುವ
ಮಹಾಮಾರಿಯ ನಿಯಂತ್ರಿಸಿ

— ವಿಜಯ್‌ಕುಮಾರ್ ಎಚ್.ಕೆ.

## ಸಾಮಾಜಿಕ ಅಂತರ

ದೇವಾ! ನೀಡೊಂದು ವರ
ಮನೆಯಲ್ಲೇ ಇದ್ದು, ಕರಗಳನ್ನು ತೊಳೆದು
ಬಿಡುವೆವು ಸಾಮಾಜಿಕ ಅಂತರ

ಫಲವೇನು ಕಲಿತು ಹಲವಾರು ವಿದ್ದೆ
ಜಗವಿಡೀ ಜನರನ್ನು ಹೆದರಿಸುವ
ಕೊರೊನಾ ಕೆಡಿಸುವಾಗ ನಿದ್ದೆ

ಆವರಿಸಿದ್ದರಿಂದ ಕೊರೊನಾ ಕರಿನೆರಳು
ಬಂಧುಮಿತ್ರರನ್ನು ತ್ಯಜಿಸಿ ಏಕಾಂಗಿ
ಕೊಠಡಿಯಲ್ಲಿ
ತೋಡಿಕೊಂಡನು ಅಳಲು

ವೈದ್ಯರಿಗೆ ಗೌರವ ನೀಡು
ಅವರ ಮೇಲೆ ಹಲ್ಲೆ ನಡೆಸಿದ್ದರೆ
ಕಾರಾಗ್ರಹವೇ ನಿನ್ನ ಬೀಡು

— ಡಾ. ವಿ. ಪುಗಳೇಂದಿ